# ಕರುಣಿಸೋ ರಂಗಾ ಕರುಣಿಸೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 83.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 263.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 52.
4. **Note:** This song is not available in the books of Sri. Pavanje Guru Rao and also in the books of Gorebala Hanumantha Rayaru.
5. **Note:** Ankita is different in both these books. We have considered Ref.1 as standard and taken that Ankita for listing.
6. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are almost same as in Ref. 1, except few differences which are given in yellow highlights.
7. **Note:** Singer has followed these lyrics.

ರಾಗ: ಪೂರ್ವಿ ತಾಳ: ಆದಿ

ಕರುಣಿಸೋ ರಂಗಾ ಕರುಣಿಸೋ
ಹಗಲು ಇರುಳು ನಿನ್ನ ಸ್ಮರಣೆ ಮರೆಯದಂತೆ || ಪ ||

ರುಕುಮಾಂಗದನಂತೆ ವ್ರತವ ನಾನರಿಯೆನು
ಶುಕ ಮುನಿಯಂತೆ ಸ್ತುತಿಸಲು ಅರಿಯೆ
ಬಕವೈರಿಯಂತೆ ಧ್ಯಾನವ ಮಾಡಲರಿಯೇ ದೇ-
ವಕಿಯಂತೆ ಮುದ್ದಿಸಲೂ ಅರಿಯೆನೋ, ರಂಗಾ || ೧ ||

ಗರುಡನಂತೆ ಪೊತ್ತು ತಿರುಗಲು ಅರಿಯೆ ನಾನು
ಕರಿರಾಜನಂತೆ ಕರಿಯಲು ಅರಿಯೆ (ಕರೆಯಲರಿಯೆ ಕರಿರಾಜನಂತೆ)
ವರಕಪಿಯಂತೆ ದಾಸ್ಯವ ಮಾಡಲರಿಯೇ
ಸಿರಿಯಂತೆ ನಿನ್ನ ಮೆಚ್ಚಿಸಲರಿಯೆ ರಂಗಾ || ೨ || (ಸಿರಿಯಂತೆ ನೆರೆದು ಮೋಹಿಸಲು ಅರಿಯೆನೋ, ಕೃಷ್ಣಾ)

ಬಲಿಯಂತೆ ದಾನವ ಕೊಡಲು ಅರಿಯೆನು, ಭಕ್ತಿ
ಛಲವನು ಅರಿಯೇ ಪ್ರಹ್ಲಾದನಂತೆ
ವರಿಸಲು ಅರಿಯೆ ಅರ್ಜುನನಂತೆ ಸಖನಾಗಿ
ಸಲಹೋ ದೇವರ ದೇವ ಶ್ರೀ ಪುರಂದರ ವಿಠ್ಠಲ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ರುಕುಮಾಂಗದ – ರುಕ್ಮಾಂಗದ; ಋತುಧ್ವಜನ ಮಗ. ವಿಂಧ್ಯಾವಳಿ ಅವನ ಹೆಂಡತಿ, ಧರ್ಮಾಂಗದ ಮಗ. ರುಕ್ಮಾಂಗದನು ವಿಷ್ಣುಭಕ್ತನಾಗಿದ್ದು ಏಕಾದಶೀವ್ರತ ನಿಷ್ಠೆಯಲ್ಲಿದ್ದವನು. ಇವನ ವ್ರತಸ್ಥೈರ್ಯವನ್ನು ಪರೀಕ್ಷಿಸಲೆಂದು ಬ್ರಹ್ಮನು ಮೋಹಿನಿಯನ್ನು ಕಳುಹಿಸಿದಾಗ, ತನ್ನ ಮಗ ಧರ್ಮಾಂಗದನ ಪ್ರಾಣವನ್ನೊಪ್ಪಿಸಲು ಸಿದ್ಧನಾದರೂ ಏಕಾದಶೀ ವ್ರತವನ್ನು ಭಂಗ ಮಾಡಲು ಒಪ್ಪಲಿಲ್ಲ. ಈ ಕಥೆ ನಾರದೀಯ ಪುರಾಣದಲ್ಲಿ ಬರುತ್ತದೆ.

**ಶುಕಮುನಿ** – ಕೃಷ್ಣದ್ವೈಪಾಯನ (ವೇದವ್ಯಾಸರ ಮಗ) ಮುನಿಯಿಂದ ಘೃತಾಚಿ ಎಂಬ ಅಪ್ಸರೆಯಲ್ಲಿ ಹುಟ್ಟಿದವನು; ಈತನು ಜನಕ, ನಾರದ, ಮೊದಲಾದವರಲ್ಲಿ ಬ್ರಹ್ಮ ವಿದ್ಯೆ ಹೊಂದಿ ವೈರಾಗ್ಯಭರಿತನಾದನು. ಪರೀಕ್ಷಿದ್ರಾಜನಿಗೆ ಭಾಗವತವನ್ನೂ, ಗಂಧರ್ವನಿಗೆ ಭಾರತವನ್ನೂ ತಿಳಿಸಿಕೊಟ್ಟವನು. ಸಂಕೀರ್ತನ ಭಕ್ತರಲ್ಲಿ ಮೊದಲಿಗನು. (ಭಾಗವತ ೧, ೧೯-೨೫, ಭಾರತ ಶಾಂತಿ ೨೩೮; ೩೨೯)

**ಬಕವೈರಿ** – ಬಕಾಸುರನನ್ನು ಕೊಂದ ಭೀಮ; ಇನ್ನೊಂದು ಅವತಾರದಲ್ಲಿ ಹನುಮಂತ; ಧ್ಯಾನಕ್ಕೆ ಪ್ರಸಿದ್ಧನಾದವನು.

**ವರೆಕಪಿ** – ಹನುಮಂತ.

**ಭಕ್ತಿ ಛಲ** – ದೃಢಭಕ್ತಿಯ ಹಟ.

**ಸಿರಿ** = ಲಕ್ಷ್ಮೀ

**Classification:** Keerthane
**Ankita:** purandara vittala
**Location:** NA
**Category:** Pooja Tatva, Nama Smarane,

**Sub-Category:** ranga, Krishna, karuna, karune, irulu, hagalu, smarane, rukmangada, vrata, muni, bhima, Dhyana, Devaki, garuda, gaja, hanuma, Lakshmi, bali, prahallada, dAna, arjuna, mitra, deva,
**Pravachana:** NA
**Explanation:** Dr. Vijayendra Desai, Dharwad.